# ಪ್ರಬಂಧ

ಕೆಲವರು ಉದ್ದೇಶಪೂರ್ವಕವಾಗಿ 'ಉಪಹಾರ' ಎಂದು ತಪ್ಪಾಗಿ ಮುದ್ರಿಸುವ ಮೂಲಕ 'ಹಾರ' ಹಾಕಿ ಸ್ವಾಗತಿಸುತ್ತಾರೆ. ಇಂತಹ ಸರ್ವಮಾನ್ಯ ಕಾಗುಣಿತ ದೋಷವನ್ನು ಸರಿಪಡಿಸಲು ಕೇಶಿರಾಜನ ವ್ಯಾಕರಣ ಪಠ್ಯಕ್ಕೆ ಮೊರೆ ಹೋಗುವ ಅಗತ್ಯವಿಲ್ಲ. ಇದೊಂದು ಸಭಿಕರನ್ನು ಸೆಳೆಯುವ 'ಉಪ'ಕ್ರಮ ಎಂದು ಮನ್ನಿಸಿದರೆ ಸಾಕು. 'ಮಧ್ಯಾಹ್ನ ಒಂದು ಗಂಟೆಗೆ ಭೋಜನ' ಎಂದು ಛಾಪಿಸುವ ಪ್ರಕಾಶಕರು ಹಣವಂತರೇ ಆಗಿರಬೇಕೆಂದೇನೂ ಇಲ್ಲ; ಲೇಖಕರು ಪ್ರಭಾವಿಗಳಾಗಿದ್ದರೆ ಪ್ರಾಯೋಜಕರು ಸರತಿಯಲ್ಲಿ ನಿಂತಿರುತ್ತಾರೆ. ಲೇಖಕರ ಅಧಿಕಾರ ಸ್ಥಾನಮಾನದ ಔನ್ನತ್ಯಕ್ಕೆ ಅನುಗುಣವಾಗಿ ಅವರನ್ನು ಮೆಚ್ಚಿಸಲು ಅ-ಹೃದಯರೂ ಸ-ಹೃದಯರ ಪೋಷಾಕಿನಲ್ಲಿ ಶಿಸ್ತಿನಿಂದ ಕಾರ್ಯಕ್ರಮದ ಆಸನಗಳನ್ನು ತುಂಬಿಸಬಲ್ಲರು.

ಇತ್ತೀಚೆಗೆ ಪುಸ್ತಕ ಬಿಡುಗಡೆಯ ಒಂದು ಆಹ್ವಾನ ಪತ್ರಿಕೆಯಲ್ಲಿ ವಿನೂತನ ಆಕರ್ಷಣೆ ಎಂಬಂತೆ ಮಾಧ್ಯಾಹ್ನದ ಭೋಜನ ಸರಬರಾಜು ಮಾಡುವ ಹೋಟೆಲಿನ ಹೆಸರು ನಮೂದಿಸಿದ್ದು ಹುಬ್ಬೇರಿಕೆಗೆ, ಚರ್ಚೆಗೆ ಹಾಗೂ ಟ್ರೋಲಿಗೂ ಈಡಾಗಿತ್ತು. ಇನ್ನುಮೇಲೆ ಆಹಾರ ಪೂರೈಕೆಯ ಹೋಟೆಲಿನ ಹೆಸರನ್ನು ಬಿಡುಗಡೆಯಾಗುವ ಪುಸ್ತಕದ ಶೀರ್ಷಿಕೆಗಿಂತ ಐದು ಪಾಯಿಂಟು ಹೆಚ್ಚಿನ ಫಾಂಟ್‌ನಲ್ಲಿ ಮುದ್ರಿಸಿದರೆ ಹುಬ್ಬೇರಿಸಬೇಕಿಲ್ಲ. ಇದರಿಂದ ವಾರಾಂತ್ಯದಲ್ಲಿ ಏರ್ಪಾಡಾಗುವ ಹಲವಾರು ಬಿಡುಗಡೆ ಕಾರ್ಯಕ್ರಮಗಳಲ್ಲಿ ಸಹೃದಯರು ತಾವು ಯಾವುದರಲ್ಲಿ ಭಾಗವಹಿಸಬೇಕು ಎಂಬ ಗೊಂದಲ ತಪ್ಪುತ್ತದೆ. ಅವರಿಗೆ ತಮ್ಮ ತಮ್ಮ ಬೌದ್ಧಿಕ ಅಥವಾ ಭೌತಿಕ ಹಸಿವೆಗೆ ತಕ್ಕಂತೆ ಒಳ್ಳೆಯ ಪುಸ್ತಕದ ಲೇಖಕನ ಅಥವಾ ಒಳ್ಳೆಯ ಹೋಟೆಲಿನ ಹೆಸರನ್ನು ಪರಿಗಣಿಸಿ ಭಾಗವಹಿಸುವ ಕಾರ್ಯಕ್ರಮವನ್ನು ಖಚಿತವಾಗಿ ಆಯ್ಕೆ ಮಾಡಿಕೊಳ್ಳುವ ಅಪೂರ್ವ ಅವಕಾಶ ಲಭಿಸುತ್ತದೆ.

ಇಷ್ಟೆಲ್ಲಾ ತಿಣುಕಾಟದ ತರುವಾಯವೂ ಪುಸ್ತಕ ಬಿಡುಗಡೆಯ ದಿನ ಸಹೃದಯರು ಸಕಾಲದಲ್ಲಿ, ಸಾಕಷ್ಟು ಸಂಖ್ಯೆಯಲ್ಲಿ ನೆರೆಯುತ್ತಾರೆಂಬ ಖಾತ್ರಿ ಇಲ್ಲ. ಇಂಥ ಕಾರ್ಯಕ್ರಮಕ್ಕೆ ಗೈರಾಗಲು ಸಾಲುಸಾಲು ಕಾರಣಗಳಿರುತ್ತವೆ; ಮದುವೆ, ಹುಟ್ಟುಹಬ್ಬ, ಸೀಮಂತ, ಸತ್ಯನಾರಾಯಣ ಪೂಜೆ, ಗೃಹಪ್ರವೇಶ ಇತ್ಯಾದಿ ಇತ್ಯಾದಿ. ಇಂಥವರೇ ಬಹುಸಂಖ್ಯಾತರು. ಹಾಜರಾಗಲು ಇರುವ ಏಕೈಕ ಕಾರಣವೆಂದರೆ ಆಯೋಜಕರ ಮೇಲಿನ ಪ್ರೀತಿ. ಅದು ನೈಜ ಸ್ವರೂಪದಲ್ಲಿ ಇರುವವರ ಜನಸಂಖ್ಯೆ ಅತಿ ಕಡಿಮೆ. ಗೈರುಹಾಜರಾತಿ ಪಂಗಡದ ಕಾರಣಗಳನ್ನು ಸದೆಬಡಿಯಲು ನಾನೊಂದು ಉಪಾಯ ಹುಡುಕಿದ್ದೇನೆ: ನೀವು ನಾಸ್ತಿಕರೇ ಆಗಿರಿ, ಶಾಸ್ತ್ರಗಳನ್ನು ನಂಬದಿರಿ, ಪಂಚಾಂಗ ಸುಳ್ಳು ಎಂದು ಬರೆಯಿರಿ, ಭಾಷಣ ಕೊರೆಯಿರಿ. ಆದರೆ, ಪುಸ್ತಕ ಬಿಡುಗಡೆ ಸಮಾರಂಭ ಏರ್ಪಡಿಸುವ ಮೊದಲು ಯೋಗ್ಯ ಜ್ಯೋತಿಷಿಯೊಬ್ಬರನ್ನು ಸಂಪರ್ಕಿಸಿ ಅತ್ಯಂತ ಅಶುಭ ಮುಹೂರ್ತ ತಿಳಿದುಕೊಂಡು ದಿನಾಂಕ ನಿರ್ಧರಿಸಿದರೆ ಪ್ರೇಕ್ಷಕರ ಅಭಾವದ ಸಂಕಷ್ಟಹರಣ ಸಾಧ್ಯವಾಗಿಸಬಹುದು. ಏಕೆಂದರೆ ಆ ದಿನ ಬಿಡುಗಡೆಗೆ ಸಾಂಪ್ರದಾಯಿಕ ಅಡೆತಡೆಗಳು ಇರುವುದಿಲ್ಲ.

ಕುಮುಹೂರ್ತ ನೋಡಿಕೊಂಡು ದಿನಾಂಕ ನಿಗದಿ ಮಾಡಿದ ಮಾತ್ರಕ್ಕೆ ಸಕಲ ಕಂಟಕಗಳಿಂದ ಪಾರಾದೆವೆಂದು ಬೀಗಲೂ ಅವಕಾಶವಾಗದು. ನನ್ನದೇ ಒಂದು ಕಹಿ ಅನುಭವ ಹೇಳುತ್ತೇನೆ ಕೇಳಿ: ಬಳ್ಳಾರಿಯಲ್ಲಿ ಗೆಳೆಯರೆಲ್ಲಾ ಸೇರಿ ನನ್ನದೊಂದು ಪುಸ್ತಕ ಬಿಡುಗಡೆ ಕಾರ್ಯಕ್ರಮ ಏರ್ಪಡಿಸಿದ್ದೆವು. ಪ್ರಕಾಶಕ ಮತ್ತು ಲೇಖಕ ಎರಡೂ ನಾನೇ ಆಗಿದ್ದ ಕಾರಣ ಒಂದು ವಾರ ಮೊದಲೇ ಊರಲ್ಲಿ ಬೀಡುಬಿಟ್ಟು ಕಾರ್ಯಕ್ರಮದ ಯಶಸ್ಸಿಗಾಗಿ ಶಕ್ತಿಮೀರಿ ಪರಿಶ್ರಮ ಹಾಕಿದೆ. ಕಾರ್ಯಕ್ರಮದ ಸಿದ್ಧತೆಗಳು ಮಂಡಾಳೊಗ್ಗರಣೆ ಮತ್ತು ಹಿಟ್ಟಚ್ಚಿದ ಮೆಣಸಿನಕಾಯಿ ಜೊತೆಗೆ ತಾ ಮುಂದು ನಾ ಮುಂದು ಎಂದು ಸ್ಪರ್ಧೆಗೆ ಇಳಿದಿದ್ದವು. ಜೊತೆಗಾರರ ಉತ್ಸಾಹ ಹುರುಪು ಹುಟ್ಟಿಸಿತ್ತು.

ಬಿಡುಗಡೆಯ ದಿನ ಅರ್ಧ ಗಂಟೆ ಮೊದಲೇ ಸ್ಥಳಕ್ಕೆ ಹೋಗಿ ಎಲ್ಲಾ ವ್ಯವಸ್ಥೆ ಪರಿಶೀಲಿಸಿ ಸಭಿಕರನ್ನು ಕಾಯತೊಡಗಿದೆ. ನಿಗದಿತ ಸಮಯ ಮೀರಿದರೂ ನೆರೆದವರ ಸಂಖ್ಯೆ ಹತ್ತಿಪ್ಪತ್ತು ದಾಟುತ್ತಿಲ್ಲ. 'ಅಣಾ, ನಿಂಗೊತ್ತಲ್ಲ... ಈ ಊರನ ಜನ ಜಲ್ದಿ ಎದ್ದಳಂಗಿಲ್ಲ. ನಿಧಾನ ಬರ್ತಾರ ಸುಮ್ಕಿರು...' ಅಂತ ಆಡಿದ ಭರವಸೆಯ ಮಾತುಗಳು ನನ್ನ ಸಹನೆಯ ಬಲೂನಿಗೆ ಸೂಜಿ ಚುಚ್ಚಿದಂತಿದ್ದವು. ಕೊನೆಗೂ ನಿರೀಕ್ಷೆಯಷ್ಟು